# ಕೆಲಸ ಬಿಟ್ಟು ನಟನಾಗ ಬಂದೆ

## ಲೋಕೇಶ್ (ಆರುವ)

ಝೀ ಕನ್ನಡದ 'ಶ್ರೀಮಾನ್ ಶ್ರೀಮತಿ'ಯ ಶ್ರೀರಾಮಚಂದ್ರೇಗೌಡ



★ *ಕೆಲ್ಸಾ ಬಿಟ್ಟು ಬಣ್ಣ ಹಚ್ಚಿದ್ದು ಏಕೆ?*

ನಾನು ಒಂಬತ್ತನೇ ತರಗತಿಯಲ್ಲಿ ಇದ್ದಾಗಲೇ ಪೇಪರ್ ಜಾಹೀರಾತು ನೋಡಿ ನಟನಾಗಲು ಫೋಟೋ ಕಳುಹಿಸಿದ್ದೆ. ಅಂದರೆ ನನಗೆ ಆ ಹುಚ್ಚು ಇದ್ದೇ ಇತ್ತು. ಸೂಕ್ತ ಮಾರ್ಗದರ್ಶಕರಿಲ್ಲದೆ ಮೈಸೂರಿನಲ್ಲಿ ಉದ್ಯೋಗಕ್ಕೆ ಸೇರಿದೆ. ಆದರೆ ಅಭಿನಯ, ಮಾಡೆಲಿಂಗ್ ಮಾಡುವ ಬಗ್ಗೆ ಮಾತನಾಡುತ್ತಲೇ ಇದ್ದೆ. 2003ರಲ್ಲಿ ನನ್ನ ಗೆಳೆಯರು 'ಮೊದಲು ನಾಟಕದಲ್ಲಿ ಸೇರು ಅಲ್ಲಿ ಒಳ್ಳೆಯ ತರಬೇತಿ ಸಿಗುತ್ತದೆ' ಎಂದು ಸಲಹೆ ನೀಡಿದರು. ಮಂಡ್ಯ ರಮೇಶ್ ಅವರನ್ನು ಹುಡುಕಿಕೊಂಡು ಹೋದೆ. ಆಗ ಅವರು ತಮ್ಮ ತಂಡದ ಯಾವ ನಾಟಕ ಇಲ್ಲ, ಅರುಣ್ ಮೂರ್ತಿ 'ನನ್ನಪ್ಪ' ಎನ್ನುವ ನಾಟಕ ಮಾಡಿಸುತ್ತಿದ್ದಾರೆ ನಿನಗೆ ಇಷ್ಟ ಇದ್ದರೆ ಒಮ್ಮೆ ಅವರನ್ನು ಭೇಟಿಯಾಗು ಅಂದರು. ಅವರ ನಾಟಕದಲ್ಲಿ ಅಭಿನಯವನ್ನೂ ಮಾಡಿದೆ. ಅದೇ ನನ್ನ ಮೊದಲ ನಾಟಕ.

★ *ನಿಮ್ಮ ಅಭಿಮಾನಿ ಸಂಘ ಕಟ್ಟಿದ್ದಾರಂತೆ..*

ನಮ್ಮೂರು ಚಾಮರಾಜನಗರ ಜಿಲ್ಲೆ ಬಸವಹಟ್ಟಿ. ರಂಗಭೂಮಿಯಿಂದ ಕಿರುತೆರೆಗೆ ಬಂದು ಹತ್ತುವರ್ಷ ಕೆಲಸ ಮಾಡಿದೆ. ಕಳೆದ ವರ್ಷ 'ಚತುರ್ಭುಜ' ಸಿನಿಮಾದಲ್ಲಿ ನಾಯಕನಾಗಿ ನಟಿಸಿದೆ. ಅದಕ್ಕೆ ಮುಖ್ಯ ಕಾರಣ ಆಗಿದ್ದು 'ಪಾರ್ವತಿ ಪರಮೇಶ್ವರ'ದ ಲಾಯರ್ ಗುಂಡಣ್ಣ ಪಾತ್ರ. ಸಿನಿಮಾ ಮಾರುಕಟ್ಟೆಯ ದೃಷ್ಟಿಯಿಂದ ಲಾಭದಾಯಕ ಆಗದಿದ್ದರೂ ಒಳ್ಳೆಯ ಹೆಸರನ್ನು ತಂದುಕೊಟ್ಟಿತು. ಅದಾಗಿ ಆರು ತಿಂಗಳ ನಂತರ 'ಶ್ರೀಮಾನ್ ಶ್ರೀಮತಿ' ನಟಿಸಲು ಆರಂಭಿಸಿದೆ. ಇದಕ್ಕೂ ಕಾರಣ ನಿರ್ದೇಶಕ ಪೃಥ್ವಿರಾಜ್ ಕುಲಕರ್ಣಿ. ನಾನು ಹತ್ತೂ ವರ್ಷದಿಂದ ಅವರ ಜೊತೆಗೆ ಕೆಲಸ ಮಾಡುತ್ತಿದ್ದೇನೆ. ಬೇರೆ ಬೇರೆ ಅವಕಾಶಗಳು ಸಿಕ್ಕರೂ ಹೋಗಿಲ್ಲ. ಈ ಧಾರಾವಾಹಿಯಲ್ಲಿಯೂ ಅವರೇ ವಿಶ್ವಾಸದಿಂದ ಶ್ರೀರಾಮಚಂದ್ರನ ಪಾತ್ರ ಕೊಟ್ಟರು. ಕಥೆಯ ಬಗ್ಗೆ ಚರ್ಚೆ ನಡೆದಿತ್ತು, ವರ್ಷಾ, ರಾಘವೇಂದ್ರ ಹುಣಸೂರು ಮತ್ತು ನಿರ್ದೇಶಕರು ಇದ್ದರು. ನಾನು ಚಾಮರಾಜನಗರ ಜಿಲ್ಲೆಯ ಪ್ರಾದೇಶಿಕ ಭಾಷೆಯಲ್ಲಿ ಮಾತನ್ನು ಆಡಿದೆ. ಕಥಾ ನಿರೂಪಣೆ ಅದೇ ಶೈಲಿಯಲ್ಲಿ ಇದ್ದರೆ ಚೆನ್ನಾಗಿರುತ್ತದೆ ಎಂದು ನಿರ್ಧರಿಸಿ ಅದೇ ಧಾಟಿಯಲ್ಲಿ ಸಾಗುತ್ತಿದೆ. ಇದರಿಂದ ನಮ್ಮೂರು, ಸಂತೆಮರಹಳ್ಳಿ ಮೊದಲಾದ ಗ್ರಾಮಗಳ ಯುವಕರು ಸೇರಿ ಸಂಘ ಕಟ್ಟಿದ್ದಾರೆ. ಒಳ್ಳೆಯ ಕೆಲಸಗಳನ್ನು ಏನಾದರೂ ಮಾಡಲು ಸಾಧ್ಯವಾದರೆ ಅದರ ಮೂಲಕ ಮಾಡುವುದು ಎಂದು ನಾನು ಅದರಲ್ಲಿ ಭಾಗಿಯಾಗಿದ್ದೇನೆ.

★ *ಎದುರು ಬದರು ಮನೆಯೊಡತಿಯರ ಮೇಲಿನ ಮೋಹ ಏನು?*

ನಮ್ಮ ಧಾರಾವಾಹಿಯ ಟ್ಯಾಗ್‌ಲೈನ್ 'ತನ್ ಮನೆಯವ್ರು ಮನಸಲ್ಲಿ, ಎದುರು ಮನೆಯವ್ರು ಕನಸಲ್ಲಿ'. ಇಲ್ಲಿ ನಾನು ಚಾಮರಾಜನಗರದಿಂದ ಬೆಂಗಳೂರಿಗೆ ಬಂದು ಪಟಾಪಟಿ ಚಡ್ಡಿ ಬಟ್ಟೆ ವ್ಯಾಪಾರಿಯಾಗಿದ್ದೇನೆ. ಗುಪ್ತವಾಗಿ ಎದುರು ಅಂಗಡಿ ಮಾಲೀಕನ ಹೆಂಡತಿಯನ್ನು ಪ್ರೀತಿಸುತ್ತೇನೆ. ಅದು ಅವನಿಗೂ ಗೊತ್ತಿಲ್ಲ ಅವನ ಹೆಂಡತಿಗೂ ಗೊತ್ತಿಲ್ಲ. ಅವನೂ ಅಷ್ಟೆ ಗುಪ್ತವಾಗಿ ನನ್ನ ಹೆಂಡತಿಯನ್ನು ಪ್ರೀತಿಸುತ್ತಾನೆ. ಇಂತಹ ಗುಪ್ತ ಸಂಗತಿಯನ್ನು ವಿನೋದಾತ್ಮಕವಾಗಿ ಕಥೆಯನ್ನು ನಿರೂಪಿಸಲಾಗುತ್ತಿದೆ.

★ *ಎಲ್ಲಾ ಸರಿ. ನೀವು ಆರುವ ಆಗಿದ್ಯಾಕೆ?*

ನಾನು ದೈವ ಭಕ್ತ. ಸುಮಾರು ವರ್ಷ ಲೋಕೇಶ ಎಂದೇ ವ್ಯವಹರಿಸುತ್ತಿದ್ದೆ. ನಮ್ಮ ಜ್ಯೋತಿಷಿ ಒಬ್ಬರು ಸಂಖ್ಯಾಶಾಸ್ತ್ರದ ಪ್ರಕಾರ ಹೆಸರು ಬದಲಿಸಲು ಸೂಚಿಸಿದರು. 'ಆರುವ' ಆದೆ. ಆರುವ ಅಂದರೆ ಮಿಂಚು ಹೊಳಪು ಎಂದರ್ಥ. ಅದು ನನ್ನ ಬದುಕಿನಲ್ಲಿ ಆಗಲಿ ಎಂಬ ಆಶೆ ಕೂಡ. ಒಟ್ಟಾರೆ ಒಳ್ಳೆಯದಾಗಲಿ ಆಗುತ್ತದೆ ಎಂಬ ನಂಬಿಕೆಯಿಂದ ನಾಮ ಬದಲಾವಣೆ ಮಾಡಿದ್ದೇನೆ.

★ *ಮುಂದಿನ ಯೋಜನೆ ಏನಿದೆ?*

ನಟನೆಯೊಂದೆ... ಎರಡು ಮೂರು ವರ್ಷ ಪೂರ್ಣಾವಧಿ ರಂಗ ನಟನಾಗಿ ಇದ್ದು ಬಂದವನು. ಈಗ ನಟನೆಯನ್ನೇ ಮಾಡುತ್ತೇನೆ. ಮೊದಲ ಸಿನಿಮಾ ನಿರೀಕ್ಷೆಯ ಮಟ್ಟವನ್ನು ಮುಟ್ಟಲ್ಲ. ಈಗ 'ಸುರ್‌ಸುರ್‌ಬತ್ತಿ' ಮಾಡುತ್ತಿದ್ದೇನೆ. ಶೂಟಿಂಗ್ ಪೂರ್ಣಗೊಂಡಿದೆ. ಅಂತಿಮ ಹಂತದ ಕುಸುರಿ ಕೆಲಸ ನಡೀತಾ ಇದೆ. ಏಪ್ರಿಲ್ ಅಂತ್ಯದೊಳಗೆ ಸಿನಿಮಾ ಬಿಡುಗಡೆಯಾಗಲಿದೆ. ಸಿನಿಮಾ– ಧಾರಾವಾಹಿ ನಟಿಸುತ್ತಾ ಖುಷಿಯಿಂದ ಇದ್ದು ಬಿಡುತ್ತೇನೆ.

■ ರಾಗು